


**ಎಡದಿಂದ ಬಲಕ್ಕೆ:**

1. ಬದುಕಿನಲ್ಲಿ ಸಂತೃಪ್ತನಾಗಲಿಲ್ಲ ಎಂಬುದೇ ಆತನ ದುಃಖ 3
3. ಸ್ವಾತಂತ್ರ್ಯವನ್ನು ಉಳಿಸಿಕೊಳ್ಳುವ ಒತ್ತಡವೇ ನಿರಂತರ 3
4. ಅವರ ತೋಟಕ್ಕೆ ಸನಿಹದಲ್ಲೇ ಇದೆ ಭಾರೀ ಕೆರೆ 3
6. ವೈಶಾಲ್ಯ ಎಷ್ಟೇ ಇರಲಿ, ಅದು ಈಶ್ವರನದೇ ದೇಗುಲ 4
7. ಭಲ್ಲೂಕಗಳ ಸಂಖ್ಯೆ ಹಿಂದೆ ಇದ್ದಿದ್ದರ ನಾಲ್ಕರ ಒಂದಂಶಕ್ಕೆ ಕುಸಿದಿದೆ 4
9. ಪ್ರಕ್ಷಾಲನದ ನಂತರ ಒಳಬಂದವರು ನೂರು ಸಾವಿರಗಳ ಲೆಕ್ಕದಲ್ಲಿದ್ದಾರೆ 4
11. ಅನಗತ್ಯವಾಗಿ ಗೋಳು ತೆಗೆದಿದ್ದಕ್ಕೆ ಸಿಕ್ಕಿದ್ದು ಬರೀ ನಿಂದನೆ 4
15. ಹತ್ತಾರು ಚಾಕುಗಳು ಇದ್ದರೂ ಎಲ್ಲವೂ ಹರಿತ ಇಲ್ಲದವೇ 3
16. ವಿನಾಯಕನ ಚಪ್ಪರದಲ್ಲಿ ಪ್ರತ್ಯಕ್ಷವಾಯಿತು ಬಾಲವಿಲ್ಲದ ಮಂಗ 3
17. ಮಳೆ ಜೋರಾಯಿತೆಂದರೆ ಈ ಬೆಚ್ಚನ್ನ ಹೊದಿಕೆಯೇ ಸರಿ 3

**ಮೇಲಿಂದ ಕೆಳಕ್ಕೆ:**

1. ಎಲ್ಲರನ್ನೂ ಸತಾಯಿಸುವುದರಲ್ಲೇ ಆತನಿಗೆ ಆನಂದ 3
2. ಪಂಥಾಹ್ವಾನ ಸ್ವೀಕರಿಸಿ ಸೋತು ಅವನತಿ ಕಂಡ 3
3. ಸೇಡು ತೀರಿಸಲು ಪ್ರಯತ್ನಿಸಿದೊಡನೆ ಬಿಗಿ ತಪ್ಪಿತು 3
5. ಕಡೆಗಣಿಸಲು ಸಾಧ್ಯವೇ ಇಲ್ಲ. ಏಕೆಂದರೆ ಅದೊಂದು ಸಮುದ್ರ 3
6. ಶಾಂತಿಯೇ ಇಲ್ಲದ ಪರಿಸ್ಥಿತಿಯಿಂದ ಶರೀರ ದುರ್ಬಲಗೊಂಡಿದೆ 3
8. ಗೌರೀ ಹಬ್ಬಕ್ಕೆ ಹುಲ್ಲಿನ ಎಸಳು ಬೇಕೇ? 3
10. ನಿರಂತರ ತುಂತುರು ಮಳೆಯಿಂದ ನಡುಕ, ಸುಸ್ತು 3
12. ಗಟ್ಟಿ ಇದ್ದರಷ್ಟೇ ಉಳಿದೀತು ಭಾರೀ ಚರಂಡಿ 3
13. ಉತ್ತರಕ್ಕೂ ದಕ್ಷಿಣಕ್ಕೂ ಬಹಳ ವ್ಯತ್ಯಾಸವಿದೆ ಬಿಡಿ 3
14. ಗವಿಯಲ್ಲಿ ಕುಳಿತು ಅಭ್ಯಾಸ ಮಾಡಿ ಮಾಡಿ ಒಳ್ಳೇ ಗಾಯಕನಾದ 3

---

## 24—09—2020 ಉತ್ತರಗಳು

**ಎಡದಿಂದ ಬಲಕ್ಕೆ:**

1. ವಿಹಿತ 3. ವಿವಶ 4. ನಲಿಮೆ 6. ದಡಿಯ7. ಅಭಿನಯ 9. ಸಾಗವಾನಿ 11. ತಣ್ಣದಿರ (=ಚಂದ್ರ) 13. ಮಧುಕರ 15. ಕುಸುಮ 17. ಕುಶಾಲು 18. ಹರಣ 19. ಮೆಲ್ನುಡಿ

**ಮೇಲಿಂದ ಕೆಳಕ್ಕೆ:**

1. ವಿಷದ 2. ತನಯ 3. ವಿಲೀನ 5. ಮೆರುಗು 7. ಅನಾಗತ 8. ಯಶಸ್ಕರ 9. ಸಾಲಿಗ್ರಾಮ 10. ನಿರಾಧಾರ 12. ದಿಮಾಕು 14. ಧುರೀಣ 15. ಕುಲುಮೆ 16. ಮಹಡಿ

ಪ್ರಶ್ನಾಂಕಣ

# ಮಾನವ ಪಿತಾಮಹರು ಯಾರು ಯಾರು?

ಹೋಮೊ ಸೆಪಿಯನ್‌ರದು, ಎಂದರೆ 'ಬುದ್ಧಿವಂತ ಮನುಷ್ಯ'ರದು, ಎಂದರೆ ನಮ್ಮದು ಪ್ರಸ್ತುತ ಧರೆಯಲ್ಲಿರುವ ಏಕೈಕ ಮಾನವ ಪ್ರಭೇದ. ಆದರೆ ನಮಗೆ ಸುದೀರ್ಘ ವಂಶಾವಳಿ ಇದೆ; ನಮಗೆ ಹಲವಾರು ಮಾತಾಮಹ ಪಿತಾಮಹರಿದ್ದಾರೆ; ಅಂತಹ ಹತ್ತಾರು ಪಿತಾಮಹರು, ಪೂರ್ವ ಮಾನವರು ಮತ್ತು ಮಾನವ ರೂಪಿಗಳು ಪತ್ತೆಯಾಗಿದ್ದಾರೆ ಕೂಡ.

ಈಗ್ಗೆ 14 ರಿಂದ 15 ದಶಲಕ್ಷ ವರ್ಷಹಿಂದೆ ಇದ್ದ 'ಡ್ರಿಯೋಪಿಥೀಕಸ್' (ಚಿತ್ರ1) ಎಲ್ಲ ವಾನರರ ಮತ್ತು ಮಾನವರ ಮೂಲ ಜೀವಿ. ಅವುಗಳ ವಂಶದಲ್ಲಿ ಈಗ್ಗೆ 13 ದಶಲಕ್ಷ ವರ್ಷ ಹಿಂದೆ ವಾನರರು ಮತ್ತು ಮಾನವ ರೂಪಿಗಳು ಪ್ರತ್ಯೇಕಗೊಂಡವು. ಮಾನವ ರೂಪಿಗಳ ವಿಕಸನದ ಹಾದಿಯಲ್ಲಿ ಇಂದಿಗೆ ಏಳು ದಶಲಕ್ಷ ವರ್ಷ ಹಿಂದೆ ಮಾನವ ಸಂಕುಲ ಮೂಲತಃ ಕವಲೊಡೆಯಿತು. ಆಗಿನಿಂದ ಆಧುನಿಕ ಮಾನವರ ವರೆಗೆ ಪಳೆಯುಳಿಕೆಗಳ ರೂಪದಲ್ಲಿ ಪತ್ತೆಯಾಗಿರುವ ನಮ್ಮ ಎಲ್ಲ ಪಿತಾಮಹ ಪ್ರಭೇದಗಳನ್ನೂ ವಿದ್ವಾಂಸರು ನಾಲ್ಕು ಪ್ರಧಾನ ಗುಂಪುಗಳನ್ನಾಗಿ ವರ್ಗೀಕರಿಸಿದ್ದಾರೆ: 'ಆರ್ಡಿಪಿಥೀಕಸ್ ಗುಂಪು, ಆಸ್ಟ್ರಲೋಪಿಥೀಕಸ್ ಗುಂಪು, ಪರಾಂತ್ರೊಪಸ್ ಗುಂಪು ಮತ್ತು ಹೋಮಿನಿನ್ ಗುಂಪು'. ಇವುಗಳ ಪೈಕಿ ಈಗ್ಗೆ 2.4 ದಶಲಕ್ಷ ವರ್ಷ ಹಿಂದೆ ಮೈದಳೆದ ಹೋಮಿನಿನ್ ಗುಂಪಿನ ಪ್ರಭೇದಗಳೇ ನಮ್ಮ ನೇರ ಪಿತಾಮಹರು.

ಹೋಮಿನಿನ್ ಗುಂಪಿನ ಎಂದರೆ, ನಮ್ಮ ನೇರ ಪಿತಾಮಹರ ಗುಂಪಿನ ಈವರೆಗೆ ಪತ್ತೆಯಾಗಿರುವ ಪ್ರಭೇದಗಳು ಇವು: ಈಗ್ಗೆ 2.4 ರಿಂದ 1.4 ದಶಲಕ್ಷ ವರ್ಷ ಇಂದಿನ ಅವಧಿಯಲ್ಲಿದ್ದ: ಹೋಮೊ ಹ್ಯಾಬಿಲಿಸ್',




1.9 ರಿಂದ 1.8 ದಶಲಕ್ಷ ವರ್ಷ ಹಿಂದಿನ ಅವಧಿಯಲ್ಲಿದ್ದ 'ಹೋಮೊ ರುಡೋಲ್ಫೆನ್ಸಿಸ್', 1.8 ದಶಲಕ್ಷ ದಿಂದ 1.1 ಲಕ್ಷ ವರ್ಷ ಹಿಂದಿನ ವರೆಗೆ ಬಾಳು ನಡೆಸಿದ್ದ 'ಹೋಮೊ ಇರೆಕ್ಟಸ್' (ಚಿತ್ರ3 ), 7 ಲಕ್ಷದಿಂದ 2 ಲಕ್ಷ ವರ್ಷದ ಪೂರ್ವ ಅವಧಿಯಲ್ಲಿ ನೆಲೆಸಿದ್ದ 'ಹೋಮೊ ಹೈಡೆಲ್ಬರ್ಗೆನ್ಸಿಸ್', ಈಗ್ಗೆ 4 ಲಕ್ಷ ವರ್ಷದಿಂದ 40 ಸಾವಿರ ವರ್ಷ ಹಿಂದಿನ ಕಾಲಾವಧಿಯಲ್ಲಿದ್ದ 'ಹೋಮೊ ನಿಯಾಂಡರ್ಥಾಲೆನ್ಸಿಸ್' (ಚಿತ್ರ4 ), 3.3 ರಿಂದ 2.3 ಲಕ್ಷ ವರ್ಷ ಹಿಂದಿನ 'ಹೋಮೊ ನಾಲೆಡಿ', 1 ಲಕ್ಷ ವರ್ಷದಿಂದ 40 ಸಾವಿರ ವರ್ಷ ಹಿಂದಿನ ಅವಧಿಯಲ್ಲಿದ್ದ 'ಹೋಮೊ ಫ್ಲಾರೆಸಿಯೆನ್ಸಿಸ್'. ಆಧುನಿಕ ಮಾನವರದು (ಚಿತ್ರ5), ಎಂದರೆ ಹೋಮೊ ಸೆಪಿಯನ್ನರದು ಈಗ್ಗೆ 3 ಲಕ್ಷ ವರ್ಷ ಹಿಂದಿನಿಂದ ಪೃಥ್ವಿಯಲ್ಲಿ ಜೀವನ.

ಸ್ಪಷ್ಟವಾಗಿಯೇ ನಮ್ಮ ಪೂರ್ವ ಮಾನವ ಪ್ರಭೇದಗಳಲ್ಲಿ ಕೆಲವು ಅಷ್ಟಿಷ್ಟು ಕಾಲ ನಮ್ಮ ಪ್ರಭೇದದ ಸಮಕಾಲೀನರೂ ಆಗಿದ್ದುವು ಎಂಬುದನ್ನು ಗಮನಿಸಿದಿರಿ ತಾನೇ?

■ ಎನ್‌. ವಾಸುದೇವ್